Re · No.D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**
( ವಿಶೇಷ ಸಂಚಿಕೆ )


भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಸಲಾಗಿದೆ.

| | | | |
|---|---|---|---|
| सं. 1 | नई दिल्ली, बुधवार, अगस्त 27, 2003 | भाद्रपद 5, 1925 (शका) | खंड. 27 |
| No. 1 | New Delhi, Wednesday, August 27, 2003 | Bhadrapada 5, 1925 (Saka) | Vol. 27 |
| ಸಂ. ೧ | ನವ ದೆಹಲಿ, ಬುಧವಾರ, ಆಗಸ್ಟ್ ೨೭, ೨೦೦೩ | ಭಾದ್ರಪದ ೫, ೧೯೨೫ (ಶಕ) | ಸಂಪುಟ. ೨೭ |


**Ministry of Law and Justice**
(Legislative Department)
New Delhi, 27th August, 2003

ಕಾನೂನು ಮತ್ತು ನ್ಯಾಯ ಮಂತ್ರಾಲಯ
(ವಿಧಾಯೀ ಇಲಾಖೆ)
ನವದೆಹಲಿ, 27 ನೇ ಆಗಸ್ಟ್, 2003

The Translation in Kannada of the following Acts, namely - (1) The Prevention of Black-Marketing and Maintenance of Supplies of Essential Commodities Act, 1980 (2) The Advocates Act, 1961 (3) The Beedi and Cigar Workers (Conditions of Employment) Act, 1966 (4) The Explosive Substances Act, 1908 (5) The Industrial Disputes Act, 1947 (6) The Remittances of Foreign Exchange and Investment in Foreign Exchange Bonds (Immunities and Exemptions) Act, 1991 (7) The Child Labour (Prohibition and Regulation) Act, 1986 - are hereby published under the authority of the President and shall be demed to be authoritative texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ - (1) ಕಾಳಸಂತೆ ಪ್ರತಿಬಂಧ ಮತ್ತು ಅತ್ಯಾವಶ್ಯಕ ವಸ್ತುಗಳ ಸರಬರಾಜು ನಿರ್ವಹಣೆ ಅಧಿನಿಯಮ, 1980 (2) ನ್ಯಾಯವಾದಿಗಳ ಅಧಿನಿಯಮ, 1961 (3) ಬೀಡಿ ಮತ್ತು ಸಿಗಾರ್ ಕೆಲಸಗಾರರ (ನಿಯೋಜನೆಯ ಷರತ್ತುಗಳು) ಅಧಿನಿಯಮ, 1966 (4) ಸ್ಫೋಟಕ ಪದಾರ್ಥಗಳ ಅಧಿನಿಯಮ, 1908 (5) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (6) ವಿದೇಶಿ ವಿನಿಮಯದ ರವಾನೆಗಳು ಮತ್ತು ವಿದೇಶಿ ವಿನಿಮಯ ಬಾಂಡುಗಳಲ್ಲಿ ಹಣ ಹೂಡಿಕೆ (ವಿಶೇಷ ರಕ್ಷಣೆಗಳು ಮತ್ತು ವಿನಾಯಿತಿಗಳು) ಅಧಿನಿಯಮ, 1991 (7) ಮಕ್ಕಳ ದುಡಿಮೆ (ನಿಷೇಧ ಮತ್ತು ವಿನಿಯಮನ) ಅಧಿನಿಯಮ, 1986 - ಇವುಗಳಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2 ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಕಾಳಸಂತೆ ಪ್ರತಿಬಂಧ ಮತ್ತು ಅತ್ಯಾವಶ್ಯಕ ವಸ್ತುಗಳ ಸರಬರಾಜು ನಿರ್ವಹಣೆ ಅಧಿನಿಯಮ, 1980

(1980ರ ಅಧಿನಿಯಮ ಸಂಖ್ಯೆ 7)

[12ನೇ ಫೆಬ್ರವರಿ 1980]

ಕಾಳಸಂತೆಯನ್ನು ಪ್ರತಿಬಂಧಿಸುವ ಮತ್ತು ಜನಸಮುದಾಯಕ್ಕೆ ಅತ್ಯಾವಶ್ಯಕ ವಸ್ತುಗಳ ಸರಬರಾಜನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಕೆಲವು ಪ್ರಕರಣಗಳಲ್ಲಿ ಬಂಧಿಸಲು ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಮೂವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದು:-

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಕಾಳಸಂತೆ ಪ್ರತಿಬಂಧ ಮತ್ತು ಅತ್ಯಾವಶ್ಯಕ ವಸ್ತುಗಳ ಸರಬರಾಜು ನಿರ್ವಹಣೆ ಅಧಿನಿಯಮ, 1980 ಎಂದು ಕರೆಯತಕ್ಕದು.

(2) ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು 1979ರ ಅಕ್ಟೋಬರ್ 5ನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಮುಚಿತ ಸರ್ಕಾರ" ಎಂದರೆ ಕೇಂದ್ರ ಸರ್ಕಾರವು ಅಥವಾ ಕೇಂದ್ರ ಸರ್ಕಾರದ ಒಬ್ಬ ಅಧಿಕಾರಿಯು ಮಾಡಿದ ಬಂಧನಾದೇಶಕ್ಕೆ ಸಂಬಂಧಿಸಿದಂತೆ ಅಥವಾ ಅಂಥ ಆದೇಶದ ಮೇರೆಗೆ ಬಂಧನದಲ್ಲಿಟ್ಟ ವ್ಯಕ್ತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ, ಮತ್ತು ರಾಜ್ಯಸರ್ಕಾರವು ಅಥವಾ ರಾಜ್ಯಸರ್ಕಾರದ ಒಬ್ಬ ಅಧಿಕಾರಿಯು ಮಾಡಿದ ಬಂಧನಾದೇಶಕ್ಕೆ ಸಂಬಂಧಿಸಿದಂತೆ ಅಥವಾ ಅಂಥ ಆದೇಶದ ಮೇರೆಗೆ ಬಂಧನದಲ್ಲಿಟ್ಟ ವ್ಯಕ್ತಿಗೆ ಸಂಬಂಧಿಸಿದಂತೆ, ರಾಜ್ಯಸರ್ಕಾರ;

(ಬಿ) "ಬಂಧನಾದೇಶ" ಎಂದರೆ 3ನೇ ಪ್ರಕರಣದ ಮೇರೆಗೆ ಮಾಡಿದ ಆದೇಶ;

(ಸಿ) ಒಕ್ಕೂಟರಾಜ್ಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ "ರಾಜ್ಯಸರ್ಕಾರ" ಎಂದರೆ ಅದರ ಆಡಳಿತಗಾರ.

3. ಕೆಲವು ವ್ಯಕ್ತಿಗಳನ್ನು ಬಂಧಿಸುವ ಆದೇಶಗಳನ್ನು ಮಾಡುವ ಅಧಿಕಾರ:- (1) ಕೇಂದ್ರ ಸರ್ಕಾರವು ಅಥವಾ ರಾಜ್ಯಸರ್ಕಾರವು ಅಥವಾ ಕೇಂದ್ರ ಸರ್ಕಾರವು ಈ ಪ್ರಕರಣದ ಉದ್ದೇಶಗಳಿಗಾಗಿ ವಿಶೇಷವಾಗಿ ಶಕ್ತಗೊಳಿಸಿದ ಆ ಸರ್ಕಾರದ ಜಂಟಿಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ಯಾರೇ ಅಧಿಕಾರಿಯು, ಅಥವಾ ರಾಜ್ಯ ಸರ್ಕಾರವು, ಈ ಪ್ರಕರಣದ ಉದ್ದೇಶಗಳಿಗಾಗಿ ವಿಶೇಷವಾಗಿ ಶಕ್ತಗೊಳಿಸಿದ ಆ ಸರ್ಕಾರದ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ಯಾರೇ ಅಧಿಕಾರಿಯು, ಯಾವನೇ ವ್ಯಕ್ತಿಗೆ ಸಂಬಂಧಿಸಿದಂತೆ, ಜನಸಮುದಾಯಕ್ಕೆ ಅತ್ಯಾವಶ್ಯಕವಾಗಿರುವ ವಸ್ತುಗಳ ಸರಬರಾಜಿನ ನಿರ್ವಹಣೆಗೆ ಯಾವುದೇ ರೀತಿಯಲ್ಲಿ ಬಾಧಕವಾಗುವಂತೆ ಕೆಲಸ ಮಾಡುವುದರಿಂದ ಅವನನ್ನು ಪ್ರತಿಬಂಧಿಸುವ ದೃಷ್ಟಿಯಿಂದ, ಅಂಥ ವ್ಯಕ್ತಿಯನ್ನು ಬಂಧಿಸುವುದು ಅವಶ್ಯವೆಂದು ಮನದಟ್ಟಾದರೆ ಹಾಗೆ ಬಂಧಿಸತಕ್ಕದೆಂದು ನಿರ್ದೇಶಿಸಿ ಆದೇಶವನ್ನು ಮಾಡಬಹುದು.

ವಿವರಣೆ:- ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ "ಜನಸಮುದಾಯಕ್ಕೆ ಅತ್ಯಾವಶ್ಯಕವಾದ ವಸ್ತುಗಳ ಸರಬರಾಜಿನ ನಿರ್ವಹಣೆಗೆ ಬಾಧಕವಾಗುವಂತೆ ಯಾವುದೇ ರೀತಿಯಲ್ಲಿ ಕೆಲಸ ಮಾಡುವುದು" ಎಂಬ ಪದಾವಳಿಯು-

(ಎ) ಅತ್ಯಾವಶ್ಯಕ ವಸ್ತುಗಳ ಅಧಿನಿಯಮ, 1955 (1955ರ 10)ರ ಮೇರೆಗೆ ಅಥವಾ ಜನಸಮುದಾಯಕ್ಕೆ ಅತ್ಯಾವಶ್ಯಕವಾಗಿರುವ ಯಾವುದೇ ವಸ್ತುವಿನ ಉತ್ಪಾದನೆ, ಸರಬರಾಜು ಅಥವಾ ಹಂಚಿಕೆ ಅಥವಾ ವ್ಯಾಪಾರ ಮತ್ತು ವಾಣಿಜ್ಯ ಇವುಗಳ ನಿಯಂತ್ರಣಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ದಂಡನೀಯವಾದ ಯಾವುದೇ ಅಪರಾಧವನ್ನು ಮಾಡುವುದು ಅಥವಾ ಮಾಡಲು ಯಾವನೇ ವ್ಯಕ್ತಿಯನ್ನು ಪ್ರಚೋದಿಸುವುದು; ಅಥವಾ

(ಬಿ) (i) ಅತ್ಯಾವಶ್ಯಕ ವಸ್ತುಗಳ ಅಧಿನಿಯಮ, 1955 (1955ರ 10) ರಲ್ಲಿ ಪರಿಭಾಷಿಸಿದಂತೆ ಅತ್ಯಾವಶ್ಯಕವಾಗಿರುವಂಥ ವಸ್ತುಗಳಲ್ಲಿ, ಅಥವಾ

(ii) (ಎ) ಖಂಡದಲ್ಲಿ ಉಲ್ಲೇಖಿಸಲಾದಂತೆ ಯಾವುದೇ ಇತರ ಕಾನೂನಿನ ಮೇರೆಗೆ ಯಾವ ವಸ್ತುವಿಗೆ ಸಂಬಂಧಿಸಿದಂತೆ ಉಪಬಂಧಗಳನ್ನು ಮಾಡಲಾಗಿದೆಯೋ ಆ ವಸ್ತುಗಳಲ್ಲಿ,

- ಆ ಅಧಿನಿಯಮದ ಉಪಬಂಧಗಳನ್ನು ಅಥವಾ ಹಿಂದೆ ಹೇಳಿದ ಇತರ ಕಾನೂನನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಿಫಲಗೊಳಿಸಬಹುದಾದಂಥ ಅಥವಾ ವಿಫಲಗೊಳಿಸಲು ಪ್ರವೃತ್ತವಾಗಬಹುದಾದಂಥ ಯಾವುದೇ ರೀತಿಯಲ್ಲಿ ಲಾಭ ಮಾಡುವ ದೃಷ್ಟಿಯಿಂದ;

- ಅಂಥ ಯಾವುದೇ ಸರಕಿನಲ್ಲಿ ವ್ಯವಹಾರ ಮಾಡುವುದು ಎಂಬ ಅರ್ಥವನ್ನು ಹೊಂದಿರತಕ್ಕುದು.

(2) ಈ ಕೆಳಕಂಡ ಯಾರೇ ಅಧಿಕಾರಿಯು, ಎಂದರೆ:-

(ಎ) ಜಿಲ್ಲಾ ಮ್ಯಾಜಿಸ್ಟ್ರೇಟರು;

(ಬಿ) ಪೊಲೀಸು ಕಮಿಷನರು ನೇಮಕಗೊಂಡಿರಬಹುದಾದಲ್ಲೆಲ್ಲಾ, ಅವರೂ ಸಹ, (1)ನೇ ಉಪ-ಪ್ರಕರಣದಲ್ಲಿ ಉಪಬಂಧಿಸಿರುವಂತೆ ಅವರಿಗೆ ಮನದಟ್ಟಾದರೆ, ಸದರಿ ಉಪಪ್ರಕರಣದ ಮೂಲಕ ಪ್ರದಾನ ಮಾಡಲಾದ ಅಧಿಕಾರಗಳನ್ನು ಚಲಾಯಿಸಬಹುದು.

(3) (2)ನೇ ಉಪ-ಪ್ರಕರಣದಲ್ಲಿ ನಮೂದಿಸಿದ ಅಧಿಕಾರಿಯು ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡಿದಾಗ, ಆ ಸಂಗತಿಯನ್ನು ಅವನು ಅಧೀನನಾಗಿರುವಂಥ ರಾಜ್ಯಸರ್ಕಾರಕ್ಕೆ, ಯಾವ ಕಾರಣಗಳ ಮೇಲೆ ಆದೇಶವನ್ನು ಮಾಡಲಾಗಿದೆಯೋ ಆ ಕಾರಣಗಳು ಮತ್ತು ಅವನ ಅಭಿಪ್ರಾಯದಲ್ಲಿ ಆ ವಿಷಯಕ್ಕೆ ಸಂಬಂಧವನ್ನು ಹೊಂದಿರಬಹುದಾದಂಥ ಇತರ ವಿವರಗಳೊಂದಿಗೆ ಕೂಡಲೇ ವರದಿ ಮಾಡತಕ್ಕುದು, ಮತ್ತು ಅಂಥ ಯಾವುದೇ ಆದೇಶವು, ಅದನ್ನು ಮಾಡಿದ ತರುವಾಯ ಅದೇ ಕಾಲದಲ್ಲಿ ರಾಜ್ಯ ಸರ್ಕಾರವು ಅದನ್ನು ಅನುಮೋದಿಸಿರುವ ಹೊರತು, ಹನ್ನೆರಡು ದಿವಸಗಳಿಗಿಂತ ಹೆಚ್ಚಾಗಿ ಜಾರಿಯಲ್ಲಿರತಕ್ಕುದಲ್ಲ:

ಪರಂತು, ಆದೇಶವನ್ನು ಮಾಡುವ ಪ್ರಾಧಿಕಾರಿಯು, 8ನೇ ಪ್ರಕರಣದ ಮೇರೆಗೆ ಬಂಧನದ ಕಾರಣಗಳನ್ನು ಬಂಧನದ ದಿನಾಂಕದಿಂದ ಐದು ದಿವಸಗಳ ತರುವಾಯ ಆದರೆ ಹತ್ತು ದಿವಸಗಳಿಗೆ ಮೀರದಂತೆ ತಿಳಿಸಿರುವಲ್ಲಿ, ಈ ಉಪಪ್ರಕರಣವು, "ಹನ್ನೆರಡು ದಿವಸಗಳು" ಎಂಬ ಪದಗಳಿಗೆ ಬದಲಾಗಿ "ಹದಿನೈದು ದಿವಸಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕುದೆಂಬ ಮಾರ್ಪಾಟಿಗೆ ಒಳಪಟ್ಟು ಅನ್ವಯವಾಗತಕ್ಕುದು.

(4) ಈ ಪ್ರಕರಣದ ಮೇರೆಗೆ ರಾಜ್ಯಸರ್ಕಾರವು ಯಾವುದೇ ಆದೇಶವನ್ನು ಮಾಡಿರುವಲ್ಲಿ ಅಥವಾ ಅನುಮೋದಿಸಿರುವಲ್ಲಿ ಅಥವಾ (1)ನೇ ಉಪ-ಪ್ರಕರಣದ ಮೇರೆಗೆ ವಿಶೇಷವಾಗಿ ಶಕ್ತಗೊಳಿಸಲಾದ ರಾಜ್ಯ ಸರ್ಕಾರದ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಿಲ್ಲದ ಯಾರೇ ಅಧಿಕಾರಿಯು ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡಿದಾಗ, ರಾಜ್ಯಸರ್ಕಾರವು ಏಳು ದಿವಸಗಳೊಳಗಾಗಿ ಕೇಂದ್ರ ಸರ್ಕಾರಕ್ಕೆ, ಯಾವ ಕಾರಣಗಳ ಮೇಲೆ ಆದೇಶವನ್ನು ಮಾಡಲಾಗಿದೆಯೋ ಆ ಕಾರಣಗಳ ಸಹಿತ ಮತ್ತು ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ ಆ ಆದೇಶದ ಅಗತ್ಯತೆಗೆ ಸಂಬಂಧಪಡುವಂಥ ಇತರ ವಿವರಗಳೊಂದಿಗೆ ಆ ಸಂಗತಿಯನ್ನು ವರದಿ ಮಾಡತಕ್ಕುದು.

4. ಬಂಧನದ ಆದೇಶಗಳ ಅಮಲ್ಜಾರಿ:- ಬಂಧನಾದೇಶವನ್ನು, ದಂಡಪ್ರಕ್ರಿಯಾ ಸಂಹಿತೆ, 1973 (1974ರ 2)ರ ಮೇರೆಗೆ ದಸ್ತಗಿರಿ ವಾರೆಂಟುಗಳ ಅಮಲ್ಜಾರಿಗಾಗಿ ಉಪಬಂಧಿಸಿರುವ ರೀತಿಯಲ್ಲಿಯೇ, ಭಾರತದಲ್ಲಿನ ಯಾವುದೇ ಸ್ಥಳದಲ್ಲಿ ಅಮಲ್ಜಾರಿ ಮಾಡಬಹುದು.

5. ಬಂಧನದ ಸ್ಥಳ ಮತ್ತು ಪರಿಸ್ಥಿತಿಗಳನ್ನು ನಿಯಂತ್ರಿಸುವ ಅಧಿಕಾರ:- ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಬಂಧನಾದೇಶವನ್ನು ಮಾಡಲಾಗಿದೆಯೋ ಆ ಪ್ರತಿಯೊಬ್ಬ ವ್ಯಕ್ತಿಯು,-

(ಎ) ಪೋಷಣೆ, ಶಿಸ್ತು, ಶಿಸ್ತುಭಂಗಕ್ಕಾಗಿನ ದಂಡನೆಯ ಬಗೆಗಿನ ಷರತ್ತುಗಳನ್ನೊಳಗೊಂಡು, ಸಮುಚಿತ ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿ ಮತ್ತು ಅಂಥ ಷರತ್ತುಗಳ ಮೇರೆಗೆ ಬಂಧನದಲ್ಲಿಡಲ್ಪಡಲು ಮತ್ತು

(ಬಿ) ಸಮುಚಿತ ಸರ್ಕಾರದ ಆದೇಶದ ಮೂಲಕ, ಅದೇ ರಾಜ್ಯದೊಳಗಾಗಲಿ ಅಥವಾ ಇನ್ನೊಂದು ರಾಜ್ಯದೊಳಗಾಗಲಿ, ಬಂಧನದ ಒಂದು ಸ್ಥಳದಿಂದ ಬಂಧನದ ಇನ್ನೊಂದು ಸ್ಥಳಕ್ಕೆ ಸ್ಥಳಾಂತರಿತವಾಗಲು

- ಗುರಿಯಾಗಿರತಕ್ಕುದು:

ಪರಂತು, ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವ್ಯಕ್ತಿಯನ್ನು ಸ್ಥಳಾಂತರಿಸುವ ಯಾವುದೇ ಆದೇಶವನ್ನು ರಾಜ್ಯಸರ್ಕಾರವು ಇನ್ನೊಂದು ರಾಜ್ಯಸರ್ಕಾರದ ಸಮ್ಮತಿಯಿಲ್ಲದೆ (ಬಿ) ಖಂಡದ ಮೇರೆಗೆ ಮಾಡತಕ್ಕುದಲ್ಲ.

6. ಬಂಧನಾದೇಶಗಳು ಕೆಲವು ಕಾರಣಗಳಿಂದ ಅಸಿಂಧು ಅಥವಾ ಅಪ್ರವರ್ತನೀಯವಾಗತಕ್ಕುದಲ್ಲ:- ಯಾವುದೇ ಬಂಧನಾದೇಶವು-

(ಎ) ಅದರ ಮೇರೆಗೆ ಬಂಧನದಲ್ಲಿಡಬೇಕಾದ ವ್ಯಕ್ತಿಯು, ಆ ಆದೇಶವನ್ನು ಮಾಡುವ ಸರ್ಕಾರದ ಅಥವಾ ಅಧಿಕಾರಿಯ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯ ಪರಿಮಿತಿಗಳ ಹೊರಗಡೆ ಇರುತ್ತಾನೆಂಬ; ಅಥವಾ

(ಬಿ) ಅಂಥ ವ್ಯಕ್ತಿಯ ಬಂಧನದ ಸ್ಥಳವು ಸದರಿ ಪರಿಮಿತಿಗಳ ಹೊರಗಡೆ ಇದೆಯೆಂಬ

-ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕುದಲ್ಲ ಅಥವಾ ಅಪ್ರವರ್ತನೀಯವಾಗತಕ್ಕುದಲ್ಲ;

7. ತಲೆಮರೆಸಿಕೊಂಡಿರುವ ವ್ಯಕ್ತಿಗೆ ಸಂಬಂಧಪಟ್ಟಂತೆ ಅಧಿಕಾರಗಳು:- (1) ಸಮುಚಿತ ಸರ್ಕಾರಕ್ಕೆ ಅಥವಾ ಸಂದರ್ಭಾನುಸಾರ, 3ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಹೇಳಲಾಗಿರುವ ಅಧಿಕಾರಿಗೆ, ಯಾವ ವ್ಯಕ್ತಿಗೆ ಸಂಬಂಧಿಸಿದಂತೆ ಬಂಧನಾದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಯು ಆ ಆದೇಶವನ್ನು ಜಾರಿಗೊಳಿಸದ ಹಾಗೆ ತಲೆಮರೆಸಿಕೊಂಡಿದ್ದಾನೆಂದು ಅಥವಾ ಬಚ್ಚಿಟ್ಟುಕೊಂಡಿದ್ದಾನೆಂದು ನಂಬಲು ಕಾರಣವಿದ್ದರೆ, ಆ ಸಮುಚಿತ ಸರ್ಕಾರವು ಅಥವಾ ಅಧಿಕಾರಿಯು-

(ಎ) ಆ ಸಂಗತಿಯ ಬಗ್ಗೆ ಸದರಿ ವ್ಯಕ್ತಿಯು ಸಾಮಾನ್ಯವಾಗಿ ವಾಸಮಾಡುತ್ತಿರುವ ಸ್ಥಳದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮಹಾನಗರ ಮ್ಯಾಜಿಸ್ಟ್ರೇಟ್‌ನಿಗೆ ಅಥವಾ ಮೊದಲನೇ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಬರಹದಲ್ಲಿ ವರದಿಯನ್ನು ಮಾಡಬಹುದು; ಮತ್ತು ಆ ತರುವಾಯ ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 82, 83, 84 ಮತ್ತು 85ನೇ ಪ್ರಕರಣಗಳ ಉಪಬಂಧಗಳು ಸದರಿ ವ್ಯಕ್ತಿಗೆ ಮತ್ತು ಅವನ ಸ್ವತ್ತಿಗೆ ಸಂಬಂಧಿಸಿದಂತೆ, ಅವನನ್ನು ಬಂಧಿಸಿಡಬೇಕೆಂದು ನಿರ್ದೇಶಿಸುವ ಆದೇಶವು ಮ್ಯಾಜಿಸ್ಟ್ರೇಟನು ಹೊರಡಿಸಿದ ವಾರಂಟು ಆಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕುದು;

(ಬಿ) ರಾಜಪತ್ರದಲ್ಲಿ ಅಧಿಸೂಚಿಸಿದ ಆದೇಶದ ಮೂಲಕ, ಸದರಿ ವ್ಯಕ್ತಿಯು ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಯ ಮುಂದೆ, ಅಂಥ ಸ್ಥಳದಲ್ಲಿ ಮತ್ತು ಅಂಥ ಅವಧಿಯೊಳಗೆ ಹಾಜರಾಗಲು ಆದೇಶಿಸಬಹುದು; ಮತ್ತು ಸದರಿ ವ್ಯಕ್ತಿಯು ಅಂಥ ನಿರ್ದೇಶನವನ್ನು ಪಾಲಿಸಲು ತಪ್ಪಿದ್ದರೆ, ಅವನು ಅದನ್ನು ಪಾಲಿಸಲು ತನಗೆ ಸಾಧ್ಯವಾಗಿಲ್ಲವೆಂದು ಮತ್ತು ಆ ಆದೇಶದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅದನ್ನು ಪಾಲಿಸಲು ಅಸಾಧ್ಯಗೊಳಿಸಿದಂಥ ಕಾರಣವನ್ನು ಆದೇಶದಲ್ಲಿ ನಮೂದು ಮಾಡಿರುವ ಅಧಿಕಾರಿಗೆ ತಾನು ತಿಳಿಸಿದ್ದೆನೆಂದು ರುಜುವಾತುಪಡಿಸಿದ ಹೊರತು, ಅವನು ಒಂದು ವರ್ಷದವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(2) ದಂಡಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಏನೇ ಅಡಕವಾಗಿದ್ದಾಗ್ಯೂ, (1)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗಿನ ಪ್ರತಿಯೊಂದು ಅಪರಾಧವು ಸಂಜ್ಞೇಯವಾಗಿರತಕ್ಕುದು.

8. ಬಂಧನಾದೇಶದ ಕಾರಣಗಳನ್ನು ಆ ಆದೇಶದಿಂದ ಬಾಧಿತನಾದ ವ್ಯಕ್ತಿಗೆ ತಿಳಿಸತಕ್ಕುದು:- (1) ಬಂಧನಾದೇಶದ ಅನುಸಾರ ವ್ಯಕ್ತಿಯನ್ನು ಬಂಧಿಸಿಟ್ಟಿರುವಾಗ ಆ ಆದೇಶವನ್ನು ಮಾಡುವ ಪ್ರಾಧಿಕಾರಿಯು, ಆದಷ್ಟು ಬೇಗ, ಆದರೆ ಸಾಮಾನ್ಯವಾಗಿ ಐದು ದಿವಸಗಳನ್ನು ಮೀರದಂತೆ, ಆದರೆ ಅಸಾಧಾರಣ ಪರಿಸ್ಥಿತಿಗಳಲ್ಲಿ ಮತ್ತು ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ, ಬಂಧನದ ದಿನಾಂಕದಿಂದ ಹತ್ತು ದಿವಸಗಳನ್ನು ಮೀರದಂತೆ ಯಾವ ಕಾರಣಗಳ ಮೇಲೆ ಆ ಆದೇಶವನ್ನು ಮಾಡಲಾಗಿದೆಯೋ ಆ ಕಾರಣಗಳನ್ನು ಆ ವ್ಯಕ್ತಿಗೆ ತಿಳಿಸತಕ್ಕುದು ಮತ್ತು ಆ ಆದೇಶದ ವಿರುದ್ಧ ಸಮುಚಿತ ಸರ್ಕಾರಕ್ಕೆ ಮನವಿಯನ್ನು ಮಾಡಿಕೊಳ್ಳಲು ಅವನಿಗೆ ಅತಿ ಶೀಘ್ರ ಅವಕಾಶವನ್ನು ಒದಗಿಸತಕ್ಕುದು.

(2) (1)ನೇ ಉಪ-ಪ್ರಕರಣದಲ್ಲಿರುವುದು ಯಾವುದೂ, ಯಾವ ಸಂಗತಿಗಳನ್ನು ಬಹಿರಂಗಪಡಿಸುವುದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿರುವುದಾಗಿ ಪರ್ಯಾಲೋಚಿಸಲಾಗುವುದೋ ಆ ಸಂಗತಿಗಳನ್ನು ಬಹಿರಂಗಪಡಿಸುವಂತೆ ಆ ಪ್ರಾಧಿಕಾರಿಯನ್ನು ಅಗತ್ಯಪಡಿಸತಕ್ಕುದಲ್ಲ.

9. ಸಲಹಾ ಮಂಡಳಿಗಳ ರಚನೆ:- (1) ಕೇಂದ್ರ ಸರ್ಕಾರ ಮತ್ತು ಪ್ರತಿಯೊಂದು ರಾಜ್ಯಸರ್ಕಾರವು, ಅವಶ್ಯವಾದಾಗಲೆಲ್ಲ, ಈ ಅಧಿನಿಯಮದ ಉದ್ದೇಶಗಳಿಗಾಗಿ ಒಂದು ಅಥವಾ ಹೆಚ್ಚು ಸಲಹಾ ಮಂಡಲಿಗಳನ್ನು ರಚಿಸತಕ್ಕುದು.

(2) ಅಂಥ ಪ್ರತಿಯೊಂದು ಮಂಡಲಿಯು ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ಅಥವಾ ನ್ಯಾಯಾಧೀಶರಾಗಿ ನೇಮಕಗೊಳ್ಳಲು ಅರ್ಹರಾಗಿರುವ ಮೂವರು ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು ಮತ್ತು ಅಂಥ ವ್ಯಕ್ತಿಗಳನ್ನು ಸಮುಚಿತ ಸರ್ಕಾರವು ನೇಮಕ ಮಾಡತಕ್ಕದ್ದು.

(3) ಸಮುಚಿತ ಸರ್ಕಾರವು, ಸಲಹಾ ಮಂಡಲಿಯ ಸದಸ್ಯರ ಪೈಕಿ, ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಸದಸ್ಯನನ್ನು ಮಂಡಲಿಯ ಅಧ್ಯಕ್ಷನಾಗಿ ನೇಮಕ ಮಾಡತಕ್ಕದ್ದು, ಮತ್ತು ಒಕ್ಕೂಟ ರಾಜ್ಯಕ್ಷೇತ್ರದ ಸಂದರ್ಭದಲ್ಲಿ, ಒಂದು ರಾಜ್ಯದ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಯಾರೇ ವ್ಯಕ್ತಿಯನ್ನು ಸಲಹಾ ಮಂಡಲಿಗೆ ನೇಮಕ ಮಾಡುವುದಕ್ಕೆ, ಆ ಸಂಬಂಧಪಟ್ಟ ರಾಜ್ಯ ಸರ್ಕಾರದ ಪೂರ್ವಾನುಮೋದನೆ ಪಡೆಯತಕ್ಕದ್ದು.

10. ಸಲಹಾ ಮಂಡಲಿಗಳಿಗೆ ಒಪ್ಪಿಸುವಿಕೆ:- ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿರುವಂತೆ ಹೊರತು, ಈ ಅಧಿನಿಯಮದ ಮೇರೆಗೆ ಬಂಧನಾದೇಶವನ್ನು ಮಾಡಿರುವಲ್ಲಿ ಪ್ರತಿಯೊಂದು ಪ್ರಕರಣದಲ್ಲಿ, ಸಮುಚಿತ ಸರ್ಕಾರವು, ಆ ಆದೇಶದ ಮೇರೆಗೆ ಒಬ್ಬ ವ್ಯಕ್ತಿಯ ಬಂಧನದ ದಿನಾಂಕದಿಂದ ಮೂರು ವಾರಗಳೊಳಗೆ, ಯಾವ ಕಾರಣಗಳ ಮೇಲೆ ಆ ಆದೇಶವನ್ನು ಮಾಡಲಾಗಿದೆಯೋ ಆ ಕಾರಣಗಳು ಮತ್ತು ಆ ಆದೇಶದಿಂದ ಬಾಧಿತನಾದ ವ್ಯಕ್ತಿಯು ಮಾಡಿಕೊಂಡಿರುವ ಮನವಿ ಯಾವುದಾದರೂ ಇದ್ದರೆ, ಅದನ್ನು, ಮತ್ತು 3ನೇ ಪ್ರಕರಣದ (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿದ ಒಬ್ಬ ಅಧಿಕಾರಿಯು ಆ ಆದೇಶವನ್ನು ಮಾಡಿರುವ ಪ್ರಕರಣದಲ್ಲಿ, ಆ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಅಂಥ ಅಧಿಕಾರಿಯು ಕೊಟ್ಟ ವರದಿಯನ್ನು ಸಹ 9ನೇ ಪ್ರಕರಣದ ಮೇರೆಗೆ ರಚಿಸಲಾಗಿರುವ ಸಲಹಾ ಮಂಡಲಿಯ ಮುಂದೆ ಇಡತಕ್ಕುದು.

11. ಸಲಹಾ ಮಂಡಲಿಗಳ ಪ್ರಕ್ರಿಯೆ:- (1) ಸಲಹಾ ಮಂಡಲಿಯು, ತನ್ನ ಮುಂದೆ ಇಟ್ಟಿರುವ ಸಾಮಗ್ರಿಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಸಮುಚಿತ ಸರ್ಕಾರದಿಂದ ಅಥವಾ ಸಮುಚಿತ ಸರ್ಕಾರದ ಮುಖಾಂತರ ಆ ಉದ್ದೇಶಕ್ಕಾಗಿ ಕೋರಲಾದ ಯಾರೇ ವ್ಯಕ್ತಿಯಿಂದ ಅಥವಾ ಸಂಬಂಧಪಟ್ಟ ವ್ಯಕ್ತಿಯಿಂದ ಅದು ಅವಶ್ಯವೆಂದು ಭಾವಿಸಬಹುದಾದಂಥ ಹೆಚ್ಚಿನ ಮಾಹಿತಿಯನ್ನು ಕೋರಿದ ತರುವಾಯ, ಮತ್ತು ಯಾವುದೇ ವಿಶೇಷ ಪ್ರಕರಣದಲ್ಲಿ ಹಾಗೆ ಮಾಡುವುದು ಅತ್ಯಾವಶ್ಯಕವೆಂದು ಪರ್ಯಾಲೋಚಿಸಿದರೆ ಅಥವಾ ಸಂಬಂಧಪಟ್ಟ ವ್ಯಕ್ತಿಯು

ಸುನಾವಣೆ ಮಾಡಬೇಕೆಂದು ಇಚ್ಛಿಸಿದರೆ, ಖುದ್ದಾಗಿ ಅವನನ್ನು ಸುನಾವಣೆ ಮಾಡಿದ ತರುವಾಯ, ಸಂಬಂಧಪಟ್ಟ ವ್ಯಕ್ತಿಯ ಬಂಧನದ ದಿನಾಂಕದಿಂದ ಏಳು ವಾರಗಳೊಳಗೆ ಸಮುಚಿತ ಸರ್ಕಾರಕ್ಕೆ ಅದರ ವರದಿಯನ್ನು ಒಪ್ಪಿಸತಕ್ಕುದು.

(2) ಸಲಹಾ ಮಂಡಲಿಯ ವರದಿಯು ಅದರ ಪ್ರತ್ಯೇಕ ಭಾಗದಲ್ಲಿ, ಸಂಬಂಧಪಟ್ಟ ವ್ಯಕ್ತಿಯ ಬಂಧನಕ್ಕಾಗಿ ಸಾಕಷ್ಟು ಕಾರಣ ಇದೆಯೋ ಹೇಗೆ ಅಥವಾ ಇಲ್ಲವೋ ಹೇಗೆ ಎಂಬ ಬಗ್ಗೆ ಸಲಹಾ ಮಂಡಲಿಯ ಅಭಿಪ್ರಾಯವನ್ನು ನಿರ್ದಿಷ್ಟಪಡಿಸತಕ್ಕುದು.

(3) ಸಲಹಾ ಮಂಡಲಿಯ ಸದಸ್ಯರಲ್ಲಿ ಭಿನ್ನಾಭಿಪ್ರಾಯವುಂಟಾದಾಗ, ಅಂಥ ಸದಸ್ಯರ ಬಹುಮತದ ಅಭಿಪ್ರಾಯವು ಮಂಡಲಿಯ ಅಭಿಪ್ರಾಯವಾಗಿರುವುದಾಗಿ ಭಾವಿಸತಕ್ಕುದು.

(4) ಈ ಪ್ರಕರಣದಲ್ಲಿ ಇರುವುದು ಯಾವುದೂ, ಯಾವ ವ್ಯಕ್ತಿಯ ವಿರುದ್ಧ ಬಂಧನಾದೇಶವನ್ನು ಮಾಡಲಾಗಿದೆಯೋ ಆ ಯಾರೇ ವ್ಯಕ್ತಿಗೆ, ಸಲಹಾ ಮಂಡಲಿಗೆ ಒಪ್ಪಿಸಿರುವುದಕ್ಕೆ ಸಂಬಂಧಪಟ್ಟ ಯಾವುದೇ ವಿಷಯದಲ್ಲಿ ಯಾರೇ ನ್ಯಾಯವಾದಿಯ ಮೂಲಕ ಹಾಜರಾಗಲು ಹಕ್ಕಿರತಕ್ಕುದಲ್ಲ, ಮತ್ತು ಯಾವ ಭಾಗದಲ್ಲಿ ಆ ಸಲಹಾ ಮಂಡಲಿಯ ಅಭಿಪ್ರಾಯವನ್ನು ನಿರ್ದಿಷ್ಟಪಡಿಸಲಾಗಿದೆಯೋ ವರದಿಯ ಆ ಭಾಗವನ್ನು ಹೊರತುಪಡಿಸಿ ಸಲಹಾ ಮಂಡಲಿಯ ವ್ಯವಹರಣೆಗಳು ಮತ್ತು ಅದರ ವರದಿಯು ಗೋಪ್ಯವಾಗಿರತಕ್ಕುದು.

12. ಸಲಹಾ ಮಂಡಲಿಯ ವರದಿಯ ಮೇಲೆ ಕ್ರಮ:- (1) ಸಲಹಾ ಮಂಡಲಿಯು ತನ್ನ ಅಭಿಪ್ರಾಯದಲ್ಲಿ, ಒಬ್ಬ ವ್ಯಕ್ತಿಯ ಬಂಧನಕ್ಕಾಗಿ ಸಾಕಷ್ಟು ಕಾರಣವಿದೆ ಎಂದು ವರದಿ ಮಾಡಿರುವ ಯಾವುದೇ ಪ್ರಕರಣದಲ್ಲಿ, ಸಮುಚಿತ ಸರ್ಕಾರವು ಆ ಬಂಧನಾದೇಶವನ್ನು ಸ್ಥಿರೀಕರಿಸಬಹುದು ಮತ್ತು ಸಂಬಂಧಪಟ್ಟ ವ್ಯಕ್ತಿಯ ಬಂಧನವನ್ನು ತಾನು ಸೂಕ್ತವೆಂದು ಯೋಚಿಸುವಂಥ ಅವಧಿಯವರೆಗೆ ಮುಂದುವರೆಸಬಹುದು.

(2) ಸಲಹಾ ಮಂಡಲಿಯು ತನ್ನ ಅಭಿಪ್ರಾಯದಲ್ಲಿ, ಸಂಬಂಧಪಟ್ಟ ವ್ಯಕ್ತಿಯ ಬಂಧನಕ್ಕಾಗಿ ಸಾಕಷ್ಟು ಕಾರಣವಿಲ್ಲವೆಂದು ವರದಿ ಮಾಡಿರುವ ಯಾವುದೇ ಪ್ರಕರಣದಲ್ಲಿ, ಸಮುಚಿತ ಸರ್ಕಾರವು ಆ ಬಂಧನಾದೇಶವನ್ನು ರದ್ದುಪಡಿಸತಕ್ಕದ್ದು ಮತ್ತು ಆ ವ್ಯಕ್ತಿಯನ್ನು ತಕ್ಷಣ ಬಿಡುಗಡೆ ಮಾಡುವಂತೆ ಮಾಡತಕ್ಕದ್ದು.

13. ಬಂಧನದ ಗರಿಷ್ಠ ಅವಧಿ:- 12ನೇ ಪ್ರಕರಣದ ಮೇರೆಗೆ ಸ್ಥಿರೀಕರಿಸಿದಂಥ ಯಾವುದೇ ಬಂಧನಾದೇಶವನ್ನು ಅನುಸರಿಸಿ ಯಾರೇ ವ್ಯಕ್ತಿಯನ್ನು ಬಂಧನದಲ್ಲಿಡಬಹುದಾದಂಥ ಗರಿಷ್ಠ ಅವಧಿಯು ಬಂಧನದ ದಿನಾಂಕದಿಂದ ಆರು ತಿಂಗಳುಗಳಾಗಿರತಕ್ಕುದು:

ಪರಂತು, ಈ ಪ್ರಕರಣದಲ್ಲಿ ಅಡಕವಾಗಿರುವುದು ಯಾವುದೂ, ಮುಂಚಿತವಾದ ಯಾವುದೇ ಕಾಲದಲ್ಲಿ ಆ ಬಂಧನಾದೇಶವನ್ನು ರದ್ದುಪಡಿಸಲು ಅಥವಾ ಮಾರ್ಪಾಟುಮಾಡಲು ಸಮುಚಿತ ಸರ್ಕಾರಕ್ಕೆ ಇರುವ ಅಧಿಕಾರಕ್ಕೆ ಬಾಧಕವನ್ನುಂಟುಮಾಡತಕ್ಕುದಲ್ಲ.

14. ಬಂಧನಾದೇಶಗಳ ರದ್ದಿಯಾತಿ:- (1) ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 21ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಬಂಧನಾದೇಶವನ್ನು ಯಾವುದೇ ಕಾಲದಲ್ಲಿ,-

(ಎ) ಆ ಆದೇಶವನ್ನು ರಾಜ್ಯಸರ್ಕಾರದ ಒಬ್ಬ ಅಧಿಕಾರಿಯು ಮಾಡಿದ್ದಾಗ್ಯೂ, ಆ ರಾಜ್ಯಸರ್ಕಾರವು ಅಥವಾ ಕೇಂದ್ರ ಸರ್ಕಾರವು;

(ಬಿ) ಆ ಆದೇಶವನ್ನು ಕೇಂದ್ರಸರ್ಕಾರದ ಒಬ್ಬ ಅಧಿಕಾರಿಯು ಅಥವಾ ರಾಜ್ಯಸರ್ಕಾರವು ಮಾಡಿದ್ದಾಗ್ಯೂ, ಕೇಂದ್ರ ಸರ್ಕಾರವು

- ರದ್ದುಪಡಿಸಬಹುದು ಅಥವಾ ಮಾರ್ಪಾಟು ಮಾಡಬಹುದು.

(2) ಬಂಧನಾದೇಶದ ರದ್ದಿಯಾತಿ ಅಥವಾ ಮುಕ್ತಾಯವು, ರದ್ದಿಯಾತಿ ಅಥವಾ ಮುಕ್ತಾಯದ ದಿನಾಂಕದ ತರುವಾಯ, ಸಂದರ್ಭಾನುಸಾರ ಕೇಂದ್ರಸರ್ಕಾರವು ಅಥವಾ ಒಂದು ರಾಜ್ಯಸರ್ಕಾರವು ಅಥವಾ ಒಬ್ಬ ಅಧಿಕಾರಿಯು, ಯಾವ ಬಗ್ಗೆ ಅಂಥ ಆದೇಶವನ್ನು ಮಾಡತಕ್ಕುದೆಂದು ಮನದಟ್ಟು ಮಾಡಿಕೊಂಡಿರುವುದೋ ಆ ಬಗ್ಗೆ ಹೊಸ ಸಂಗತಿಗಳು ಉದ್ಭವಿಸಿರುವ ಯಾವುದೇ ಪ್ರಕರಣದಲ್ಲಿ, ಅದೇ ವ್ಯಕ್ತಿಯ ವಿರುದ್ಧ 3ನೇ ಪ್ರಕರಣದ ಮೇರೆಗೆ ಹೊಸ ಬಂಧನಾದೇಶವನ್ನು ಮಾಡುವುದನ್ನು ಪ್ರತಿಷೇಧಿಸತಕ್ಕುದಲ್ಲ.

15. ಬಂಧಿತ ವ್ಯಕ್ತಿಗಳ ತಾತ್ಕಾಲಿಕ ಬಿಡುಗಡೆ:- (1) ಸಮುಚಿತ ಸರ್ಕಾರವು ಯಾವುದೇ ಕಾಲದಲ್ಲಿ, ಬಂಧನಾದೇಶದ ಅನುಸಾರ ಬಂಧಿತನಾದ ಯಾರೇ ವ್ಯಕ್ತಿಯನ್ನು, ಷರತ್ತುಗಳು ಇಲ್ಲದೆಯೇ ಆಗಲಿ ಅಥವಾ ಆ ವ್ಯಕ್ತಿಯು ಅಂಗೀಕರಿಸುವಂತೆ ಆ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿರುವಂಥ ಯಾವುದೇ ಷರತ್ತುಗಳ ಮೇಲೆಯೇ ಆಗಲಿ ನಿರ್ದಿಷ್ಟಪಡಿಸಿದ ಯಾವುದೇ ಅವಧಿಯವರೆಗೆ ಬಿಡುಗಡೆ ಮಾಡಬಹುದು ಮತ್ತು ಯಾವುದೇ ಕಾಲದಲ್ಲಿ ಅವನ ಬಿಡುಗಡೆಯನ್ನು ರದ್ದುಗೊಳಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯ ಬಿಡುಗಡೆಯನ್ನು ನಿರ್ದೇಶಿಸುವಲ್ಲಿ, ಆ ಸಮುಚಿತ ಸರ್ಕಾರವು, ಆ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಿರುವ ಷರತ್ತುಗಳ ಯುಕ್ತ ಪಾಲನೆಗಾಗಿ ಜಾಮೀನುದಾರರೊಂದಿಗೆ ಅಥವಾ ಅವರಿಲ್ಲದೆ ಬಂಧಪತ್ರವನ್ನು ಬರೆದುಕೊಡಲು ಅವನನ್ನು ಅಗತ್ಯಪಡಿಸಬಹುದು.

(3) (1)ನೇ ಉಪ-ಪ್ರಕರಣದ ಮೇರೆಗೆ ಬಿಡುಗಡೆಯಾದ ಯಾರೇ ವ್ಯಕ್ತಿಯು, ಸಂದರ್ಭಾನುಸಾರ, ಅವನ ಬಿಡುಗಡೆಯನ್ನು ನಿರ್ದೇಶಿಸುವ ಅಥವಾ ಅವನ ಬಿಡುಗಡೆಯನ್ನು ರದ್ದುಪಡಿಸುವ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಕಾಲ ಮತ್ತು ಸ್ಥಳದಲ್ಲಿ ಮತ್ತು ಆ ಪ್ರಾಧಿಕಾರದ ಮುಂದೆ ಹಾಜರಾಗತಕ್ಕುದು.

(4) ಯಾವನೇ ವ್ಯಕ್ತಿಯು ಸಾಕಷ್ಟು ಕಾರಣವಿಲ್ಲದೆ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಖುದ್ದಾಗಿ ಹಾಜರಾಗಲು ತಪ್ಪಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದು.

(5) (1)ನೇ ಉಪ-ಪ್ರಕರಣದ ಮೇರೆಗೆ ಬಿಡುಗಡೆಯಾದ ಯಾರೇ ವ್ಯಕ್ತಿಯು, ಸದರಿ ಉಪ-ಪ್ರಕರಣದ ಮೇರೆಗೆ ಅಥವಾ ಅವನು ಬರೆದುಕೊಟ್ಟ ಬಂಧಪತ್ರದಲ್ಲಿ ಅವನಿಗೆ ವಿಧಿಸಿರುವ ಯಾವುದೇ ಷರತ್ತನ್ನು ಪೂರೈಸಲು ತಪ್ಪಿದರೆ, ಆ ಬಂಧಪತ್ರವನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಘೋಷಿಸತಕ್ಕುದು ಮತ್ತು ಆ ಮೂಲಕ ಬದ್ಧನಾಗಿರುವ ಯಾರೇ ವ್ಯಕ್ತಿಯು ಅದರ ದಂಡವನ್ನು ಸಂದಾಯ ಮಾಡಲು ಹೊಣೆಯಾಗತಕ್ಕುದು.

16. **ಸದ್ಭಾವನೆಯಿಂದ ಕೈಗೊಂಡ ಕ್ರಮದ ಬಗ್ಗೆ ಸಂರಕ್ಷಣೆ:-** ಈ ಅಧಿನಿಯಮವನ್ನು ಅನುಸರಿಸಿ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ಅಥವಾ ಒಂದು ರಾಜ್ಯಸರ್ಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ, ಮತ್ತು ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

17. **ನಿರಸನ ಮತ್ತು ಉಳಿಸುವಿಕೆ:-** (1) ಕಾಳಸಂತೆ ಪ್ರತಿಬಂಧ ಮತ್ತು ಅತ್ಯಾವಶ್ಯಕ ವಸ್ತುಗಳ ಸರಬರಾಜು ನಿರ್ವಹಣೆ ಅಧ್ಯಾದೇಶ, 1979 (1979ರ 10) - ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ, ಹಾಗೆ ನಿರಸನಗೊಳಿಸಿದ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕುದು.

* * * * *

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು-58/DPAL/C-8 3380